5. ವರದಿಯನ್ನೊಪ್ಪಿಸುವುದು.

ಶ್ರೀ ಎನ್. ಯೋಗೀಶ್‌ಭಟ್ (ಅಧ್ಯಕ್ಷರು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 23ನೇ ವರದಿಯನ್ನು ಒಪ್ಪಿಸುತ್ತಿದ್ದೇವೆ.

ಅಧ್ಯಕ್ಷರು : ಮಂಡಿಸಲಾಯಿತು.

6. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು.

ವಿಷಯ: ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯಲ್ಲಿನ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ನೋಟೀಸ್‌ನಲ್ಲಿ ಇಲ್ಲದಿದ್ದರೂ ಕೂಡ ಹೇಳಬೇಕಾಗುತ್ತದೆ. ನವೋದಯ ಶಾಲೆ ತುಮಕೂರಿನಲ್ಲಿ ಇದೇ ರೀತಿಯಾದ ಘಟನೆಯು ಕಳೆದ 8–10 ದಿವಸಗಳ ಹಿಂದೆ ನಡೆಯಿತು. ಅಲ್ಲಿ ರೆಸಿಡೆನಿಷಿಯಲ್ ಸ್ಕೂಲ್‌ನಲ್ಲಿರುವಂತಹ ಹೆಣ್ಣುಮಗಳು ಅವರ ಅಪ್ಪನಿಗೆ ಕಾಗದವನ್ನು ಬರೆದಿದೆ, ನಾನು ಇದರಲ್ಲಿ ಶೇಕಡ 50 ಪರ್ಸೆಂಟ್ ಮಾತ್ರ ಬರೆದಿದ್ದೇನೆ. ಈ ಶಾಲೆಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ ಅಪ್ಪ ನಾನು ಸತ್ತು ಹೋಗುತ್ತಿದ್ದೇನೆ ಎಂದು ಕಾಗದ ಬರೆದು ಅಲ್ಲಿಯೇ ಸಾಯುತ್ತಾಳೆ. ಇಲ್ಲಿ ಲೈಂಗಿಕವಾಗಿ 9ನೇ ಕ್ಲಾಸ್‌ನಲ್ಲಿ ಓದುತ್ತಿರುವಂತಹ ಹೆಣ್ಣುಮಗಳನ್ನು ಒಂದು ರೂಮಿಗೆ ಕರೆದು ಬಿಟ್ಟು ಲೈಂಗಿಕ ಚಟುವಟಿಕೆಗೆ ಬಾ ಎಂದು ಏನ್ನುವುದರ ಬಗ್ಗೆ ಆಕೆ ಬಾಯಿ ಬಿಟ್ಟು ಹೇಳಿದರೆ ಅದರ ಬಗ್ಗೆ ರಕ್ಷಣೆಯನ್ನು ಕೊಡುವುದನ್ನು ಬಿಟ್ಟು ಮುಖ್ಯೋಪಾಧ್ಯಾಯಿನಿ ಇವತ್ತು ಇದರ ಬಗ್ಗೆ ಕೇಳುವುದಕ್ಕೆ ಹೋದವರಿಗೆ ಕೆನ್ನೆಗೆ ಹೊಡೆಯುತ್ತಾರೆ. ಈ ಸ್ಥಿತಿಯನ್ನು ಸರ್ಕಾರ ಏನಾದರೂ ನಿಗ್ರಹಿಸುತ್ತದೆಯೇ? ರೆಸಿಡೆನಿಷಿಯಲ್ ಸ್ಕೂಲ್ಸ್ ಮತ್ತು ಹೆಣ್ಣು ಮಕ್ಕಳ ಸ್ಕೂಲ್‌ಗಳನ್ನು ನೀವು ಮುಚ್ಚಿಬಿಡಿ, ಮಾನ, ಮರ್ಯಾದೆ, ಗೌರವ, ಘನತೆಗಳನ್ನು ಕಳೆದುಕೊಂಡು ಅವರು ಈವತ್ತು ಎಲ್ಲಿಗೆ ಹೋಗಬೇಕಾಗಿದೆ ಈ ಶಿಕ್ಷಕರ ಮೇಲೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ? ಈ ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಶಾಲೆಯಮೇಲೂ ತೆಗೆದುಕೊಳ್ಳಬೇಕು, ಸರ್ಕಾರಿ ಶಾಲೆ ನವೋದಯ ಶಾಲೆ ಏನಿದೆ ತುಮಕೂರಿನಲ್ಲಿ ಪ್ರಮುಖವಾಗಿ ಅದರ ಮೇಲೆಯೂ ಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಅದಕ್ಕಾಗಿ ತಮಗೆ ಕೇಳುತ್ತಿರುವುದು. ಇದರ ಬಗ್ಗೆ ಹೆಣ್ಣುಮಕ್ಕಳು ಸ್ಪಷ್ಟವಾಗಿ ಬರೆದಿದ್ದಾರೆ. ನಾನು ಆ ಕಾಗದವನ್ನು ತಂದು ತಮಗೆ ಕೊಡುತ್ತೇನೆ. ಇದರಲ್ಲಿ ಹೇಳಿರುವುದು ಅಲ್ಲಿ ನಡೆಯುತ್ತಿರುವ ಘಟನೆಯಲ್ಲಿ ಶೇಕಡ 50 ಭಾಗ ಮಾತ್ರ ಆ ಶಾಲೆಯಲ್ಲಿರುವ ಕೆಲವು ಶಿಕ್ಷಕರು ಮಕ್ಕಳಿಗೆ ಹೇಳುತ್ತಾರೆ ಏನಾದರೂ ಮಾಡಿ ಯಾರಾದರೂ ಎಂಎಲ್‌ಎ ಅವರನ್ನು ಹಿಡಿದುಕೊಂಡು ಪ್ರಸ್ತಾಪ ಮಾಡಿ ನಾವು ಇದನ್ನು ಕಣ್ಣಾರೆ ನೋಡುವುದಕ್ಕಾಗುವುದಿಲ್ಲ. ಏನ್ನುವಂತಹ ಸ್ಥಿತಿ,

ರಾಜ್ಯದಲ್ಲಿರುವ ಹೆಣ್ಣುಮಕ್ಕಳು ಓದುವಂತಹ ಶಾಲೆಗಳಲ್ಲಿ ಸೃಷ್ಟಿಯಾಗಿದೆ. ಇದಕ್ಕೇನಾದರೂ ಒಂದು ಇತಿಶ್ರೀಯನ್ನು ಹಾಡಲೇಬೇಕು, ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯವನ್ನು ಮಾಡುತ್ತೇನೆ. ಇಂತಹವರ ಮೇಲೆ ತಾವು ಏನು ಕ್ರಮವನ್ನು ಜರುಗಿಸುತ್ತೀರಿ ?

ಶ್ರೀ ವಾಟಾಳ್ ನಾಗರಾಜ್ : ಆತ್ಮಹತ್ಯೆಯ ಮುನ್ನ ಆ ಹುಡುಗಿ ಇಂಥವರೇ ನನ್ನ ಮೇಲೆ ಲೈಂಗಿಕವಾದಂಥ ಅತ್ಯಾಚಾರ ಮಾಡಲಿಕ್ಕೆ ಬಂದಿದ್ದಾರೆಂಬ ಬಗ್ಗೆ ಪತ್ರ ಬರೆದಿದ್ದಾರೆ. ಅದು ಬಹಳ ಪ್ರಾಮುಖ್ಯ, ಆದ್ದರಿಂದ ಅವರನ್ನು ಹೊರಗಡೆ ಕಳುಹಿಸುವುದು ಸರಿಯಲ್ಲ. ಅವರ ಮೇಲೆ ಕೊಲೆ ಆಪಾದನೆ ಕೇಸು ಹಾಕಬೇಕು. ರಾಜ್ಯದ ಅನೇಕ ಕಡೆ ಮಂಡ್ಯ ಜಿಲ್ಲೆ, ಇಂಥ ಘಟನೆಗಳು ನಡೆದಿದೆ. ಇದನ್ನು ನಿಲ್ಲಿಸಲಿಕ್ಕೆ ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಜೆ. ಸಿ.ಮಾಧುಸ್ವಾಮಿ : ನಾವು ಸ್ಪಷ್ಟವಾಗಿ ಗೃಹ ಇಲಾಖೆಯನ್ನು ಮೇಲೆ ಚಾರ್ಜ್ ಮಾಡುತ್ತಿದ್ದೇವೆ. ಇನ್‌ಚಾರ್ಜ್ ಇರುವಂತಹ ಮಾನ್ಯ ಮುಖ್ಯಮಂತ್ರಿಗಳ ಕುಳಿತಿದ್ದು ನೀವ್ಯಾಕೆ ಎದ್ದು ನಿಂತಿರಿ ಎಂದು, ನಾನೇನು ನೀವು ಆಗಲೇ ಸುದ್ದಿ ಮಾತನಾಡುತ್ತೀರಿ ಎಂದುಕೊಂಡೆ. ಇದು ಬಹಳ ಗಹನವಾದ ವಿಷಯವಾಗಿದೆ.

ಅಧ್ಯಕ್ಷರು : ಪ್ರಾಥಮಿಕ ಶಿಕ್ಷಣ ಸಚಿವರ ಪರವಾಗಿ ಸಾರಿಗೆ ಸಚಿವರು ಮಾತನಾಡುತ್ತಿದ್ದಾರೆ. ದಯಮಾಡಿ ಕೇಳಿ.

ಶ್ರೀ ಅಂಜನಾಮೂರ್ತಿ : ಮುಖ್ಯಮಂತ್ರಿಗಳು ಇದ್ದಾರೆ.

ಶ್ರೀ ಎನ್.ಚಿಲುವರಾಯಸ್ವಾಮಿ (ಸಾರಿಗೆ ಸಚಿವರು): ಮಾನ್ಯ ಬಸವರಾಜ ಹೊರಟ್ಟಿಯವರು ಈ ಸದನಲ್ಲಿ ಇಲ್ಲ ಅವರು ಮೇಲ್ಮನೆಯಲ್ಲಿದ್ದಾರೆ ಸಾರ್, ಇದು ಒಬ್ಬರ ಪ್ರಶ್ನೆ ಅಲ್ಲ, ಇಡೀ ಸದನಕ್ಕೆ ಅಲ್ಲ, ಇಡೀ ರಾಜ್ಯದಲ್ಲಿ ಇಡೀ ಸರ್ಕಾರಕ್ಕೆ ನಿಮಗೆ ನಮಗೆಲ್ಲರಿಗೂ ಇರುವಂಥ ಪ್ರಶ್ನೆ. ಈ ರೀತಿಯ ಪ್ರಕರಣಗಳು ನಡೆಯಲಿಕ್ಕೆ ಯಾರೂ ಪ್ರೋತ್ಸಾಹ ಕೊಡಲಿಕ್ಕಾಗುತ್ತದೆಯೇ, ಇದನ್ನು ನೋಡಿಕೊಂಡು ಕುಳಿತುಕೊಳ್ಳಲಿಕ್ಕಾಗುತ್ತದೆಯೇ, ದಯಮಾಡಿ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಅವರು ಮಂಡ್ಯಜಿಲ್ಲೆಯ ಪ್ರಕರಣದ ಬಗ್ಗೆ ಹೇಳಿರತಕ್ಕಂಥದ್ದು, ಇದೆ ಮಂಡ್ಯ ಜಿಲ್ಲೆಯಲ್ಲಿ ಕಳೆದ 6 ತಿಂಗಳುಗಳ ಹಿಂದೆ ನಡೆದ ಪ್ರಕರಣದ ಬಗ್ಗೆ ನಾವೆಲ್ಲರೂ ನೋಡಿದ್ದೇವೆ. ಅದರ ಬಗ್ಗೆ ಕೂಡ ಅವರುಗಳು ಪ್ರಸ್ತಾಪ ಮಾಡಿದ್ದಾರೆ. ಇದು ಗಂಬೀರವಾಗಿರುವಂತಹ ಪ್ರಶ್ನೆ, ಇದಕ್ಕೆ ಯಾರು ಪರ, ವಿರೋಧ ಅಥವಾ ಇದನ್ನು ರಕ್ಷಿಸುವುದು ಸರ್ಕಾರದ್ದಲ್ಲ, ಯಾರದ್ದು ಜವಾಬ್ದಾರಿಯೂ ಅಲ್ಲ, ಮಾಡಲಿಕ್ಕೆ ಸಾಧ್ಯವೊ ಇಲ್ಲ. ಇದರ ಬಗ್ಗೆ ನಾನು ಸಂಬಂಧಪಟ್ಟ ಮಂತ್ರಿಗಳಿಲ್ಲದೇ ಇರುವುದರಿಂದ ತಕ್ಷಣ ಪೊಲೀಸ್ ಇಲಾಖೆಯಾಗಿರಬಹುದು, ಶಿಕ್ಷಣ ಇಲಾಖೆಯಾಗಿರಬಹುದು, ಜಾಯಿಂಟ್ ಆಗಿ

ಅದರ ವರದಿಯನ್ನು ಇವತ್ತು ತರಿಸಿಕೊಂಡು ನಾಳೆ ಸದನಕ್ಕೆ ಸಂಪೂರ್ಣವಾದ ಮಾಹಿತಿಯನ್ನು ಕೊಡುತ್ತೇವೆ ಎಂದು ನಾನು ಅಧ್ಯಕ್ಷರಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಮಹಿಳೆಯೊಬ್ಬರು ಮಾತನಾಡುತ್ತಾರೆ, ಅವರಿಗೊಂದು ಅವಕಾಶವನ್ನು ಕೊಡಿ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು): ಸರ್, ಮುಖ್ಯೋಪಾಧ್ಯಾಯಿನಿಯೊಬ್ಬರೂ ಸಹ ಒಬ್ಬ ಹೆಣ್ಣು ಆ ಹೆಣ್ಣೇ ಒಂದು ಹೆಣ್ಣು ಮಗುವಿಗೆ ಅನ್ಯಾಯವಾದಾಗ ಆಕೆ ಮಾತನಾಡಲಿಲ್ಲವೆಂದು ಅವಳಿಗೆ ಹೊಡೆದಿದ್ದಾರೆನ್ನುವ ಕಾರಣ ಪ್ರಥಮವಾಗಿ ಮುಖ್ಯೋಪಾಧ್ಯಾಯಿನಿಯವರನ್ನೇ ಬಂಧಿಸಬೇಕೆಂದು ನಾನು ಹೇಳುತ್ತಿದ್ದೇನೆ, ಇದು ರಾಜ್ಯವ್ಯಾಪಿಯಾಗುತ್ತಿದೆ, ನನ್ನ ಪುತ್ತೂರು ತಾಲ್ಲೂಕಿನ ಬೆಟ್ಟಂಪಾಡಿ ಶಾಲೆಯಲ್ಲಿ ಇದೇ ತರಹದ ಪ್ರಕರಣ ನಡೆದಿದೆ. ಅಲ್ಲಿ ಒಂದು ದಿನ ಆ ಅಧ್ಯಾಪಕರನ್ನು ಅರೆಸ್ಟ್ ಮಾಡಿದ್ದಾರೆ. ಮುರುದಿವಸವೇ ಯಾವುದೋ ಒಂದು ಸಣ್ಣ ಕೇಸ್ ಹಾಕಿ ಅವರನ್ನು ಬಿಡುತ್ತಿರುವ ಪ್ರಸಂಗಗಳಿವೆ ಇವತ್ತು ಬಜೆಟ್ಟಿನಲ್ಲಿ ಹೆಣ್ಣುಮಕ್ಕಳಿಗೆ ಯಾವುದೇ ಒಂದು ಸಹಕಾರವನ್ನು ಕೊಟ್ಟರೂ ಕೂಡ ಹೆಣ್ಣುಮಕ್ಕಳು ಬದುಕುವುದೇ ಕಷ್ಟವಾಗಿದೆ. ಹಾಗಾಗಿ ಆ ಹೆಣ್ಣುಮಕ್ಕಳನ್ನು ಜೀವಂತವಾಗಿ ಉಳಿಸಿಕೊಡಿ ಎಂದು ನಾನು ಅಧ್ಯಕ್ಷರ ಮೂಲಕ ಇಡೀ ಸರ್ಕಾರವನ್ನು ವಿನಂತಿಸುತ್ತೇನೆ.

ಶ್ರೀಮತಿ ಟಿ. ಭಾಗೀರಥಿ ಮರುಳಸಿದ್ಧನಗೌಡ : ಸನ್ಮಾನ್ಯ ಸಭಾಧ್ಯಕ್ಷರೇ ನಾನು ಒಂದು ಮನವಿಯನ್ನಷ್ಟೇ ಮಾಡಿಕೊಳ್ಳುತ್ತೇನೆ. ಇಂಥ ವಿಚಾರಗಳನ್ನು ಕೇಳಲಿಕ್ಕೆ, ಹೇಳಲಿಕ್ಕೆ ಹಾಗೂ ಪ್ರಸ್ತಾಪ ಮಾಡಲಿಕ್ಕೆ ಬೇಸರವನ್ನು ವ್ಯಕ್ತಪಡಿಸುವಂಥ ವಿಚಾರವಾಗಿದೆ, ಆದರೆ ಈ ಮಾಧ್ಯಮಗಳಲ್ಲಿ ಏನು ತೋರಿಸುತ್ತೀರಿ, ವಿದ್ಯಾರ್ಥಿಗಳ ಮೇಲಾಗುವ ಅತ್ಯಾಚಾರ ಅಥವಾ ಇನ್ನಾವುದೇ ವಿಚಾರಗಳಿದ್ದರೂ ಅವರ ವಿಚಾರಗಳನ್ನಷ್ಟೇ ಹೇಳಿ, ದಯಮಾಡಿ ಅವರ ಮುಖಗಳನ್ನು ಈ ಟಿ.ವಿ.ಯಲ್ಲಿ ದಯಮಾಡಿ ತೋರಿಸಬೇಡಿ ಎಂದು ಕೇಳಿಕೊಳ್ಳುತ್ತೇನೆ ಅಲ್ಲದೆ ಇದನ್ನು ಏತಕ್ಕೆಂದು ಬಿಡಿಸಿ ಹೇಳಬೇಕಾಗಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ಹೊರಟ್ಟಿಯವರು ಸದನದಲ್ಲಿಲ್ಲದ ಕಾರಣ ಅವರ ಪರವಾಗಿ ನಾನು ಮಾತನಾಡುತ್ತಿದ್ದೇನೆ, ಈ ಬಗ್ಗೆ ನಾನು ಮೊದಲೇ ತಮ್ಮ ಮೂಲಕ ವಿನಂತಿ ಮಾಡಿದ್ದೇನೆ. ಇದು ಬಹಳ ಗಂಭೀರವಾದ ಪ್ರಶ್ನೆಯನ್ನು ಸದನದಲ್ಲಿ ಶೂನ್ಯವೇಳೆಯಲ್ಲಿ ಎತ್ತಿರುವುದರಿಂದ ಈ ವಿಚಾರಕ್ಕೆ ಒಂದು ತಿಂಗಳ ಕಾಲಾವಕಾಶವನ್ನು ಕೇಳುತ್ತಿಲ್ಲ, ಸಂಬಂಧಪಟ್ಟ ಸಚಿವರಿಲ್ಲದೇ ಇರುವುದರಿಂದ ಇವತ್ತೇ ಆ ಸಂಬಂಧಪಟ್ಟ ವಿಚಾರದಲ್ಲಿ

ಸಂಪೂರ್ಣವಾದ ಮಾಹಿತಿಯನ್ನು ತರಿಸಿಕೊಂಡು ಸದನದಲ್ಲಿ ನಾಳೆ ಉತ್ತರವನ್ನು ಕೊಡುತ್ತೇನೆ.

ಶ್ರೀ ವಾಟಳ್ ನಾಗರಾಜ್ : ಇದು ಸರಿಯಲ್ಲ, ನಾವು ಇದನ್ನು ಒಪ್ಪುವುದಿಲ್ಲ ಸರ್ .....

ಅಧ್ಯಕ್ಷರು : ಈಗ ಮುಂದಿನ ವಿಷಯಕ್ಕೆ ಹೋಗೋಣ, ಬೇರೆ ಸಮಯದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ, ಈ ಶೂನ್ಯವೇಳೆಯಲ್ಲಿ ನೀವು ಎತ್ತಿರುವ ಈ ವಿಚಾರದ ಬಗ್ಗೆ ಚರ್ಚೆಗೆ ಅವಕಾಶವನ್ನು ಕೊಡಲಿಕ್ಕಾಗುತ್ತದೆಯೇ? ಈಗ ಮಾನ್ಯಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ಅವರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸಾವಿಗೆ ಕಾರಣರಾರು ಎಂದು ಸಮಗ್ರವಾಗಿ ಹೇಳಿದರೂ, ಸರ್ಕಾರಕ್ಕೆ ಗೊತ್ತಿದ್ದರೆ ಇದನ್ನು ಇತ್ಯರ್ಥ ಗೊಳಿಸಬೇಕಲ್ಲವೇ?

ಅಧ್ಯಕ್ಷರು : ಈಗ ವಾಟಾಳ್ ನಾಗರಾಜ್‌ರವರೇ ಇದನ್ನು ನಾನು ಒಪ್ಪುತ್ತೇನೆ, ಇತ್ತೀಚೆಗೆ ಮಾಧುಸ್ವಾಮಿಯವರು ಹೇಳಿದ ಪ್ರಕರಣಗಳು, ನೀವು ಹೇಳುತ್ತಿರುವ ಪ್ರಕರಣಗಳು, ಶ್ರೀಮತಿ ಶಕುಂತಲಾ ಶೆಟ್ಟಿಯವರು ಹೇಳಿದ ಪ್ರಕರಣಗಳು ಅಷ್ಟೇ ಅಲ್ಲ, ಶಿಕ್ಷಕರಿಂದಲೇ ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ ಎಂಬ ವಿಚಾರಗಳ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಆದ್ದರಿಂದ ಅದರ ಬಗ್ಗೆ ಸಮ್ಮರಿ ಎನ್‌ಕ್ವೈರಿ ಮಾಡಿ ಅವರನ್ನು ಡಿಸ್ಮಿಸ್ ಮಾಡಿ ಅವರ ಮೇಲೆ ಕೇಸು ಹಾಕುವಂತಹ ಕ್ರಮ ತೆಗೆದುಕೊಂಡರೆ ಉತ್ತಮವಾಗುತ್ತದೆ, After summary enquiry she should be dismissed.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):ಅಧ್ಯಕ್ಷರೆ, ಈಗಾಗಲೇ ಈ ಪ್ರಕರಣದಲ್ಲಿ ಭಾಗಿಯಾಗಿರತಕ್ಕಂಥ ಶಿಕ್ಷಕರನ್ನು ಅರೆಸ್ಟ್ ಮಾಡಿ ಅವರ ಮೇಲೆ ಕ್ರಮವನ್ನು ತೆಗೆದುಕೊಂಡು ಕೇಸನ್ನು ಬುಕ್ ಮಾಡಿದ್ದೇವೆ. ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಕ್ರಮ ತೆಗೆದುಕೊಂಡಿದೆ. ಇಂಥ ಸೂಕ್ಷ್ಮದ ವಿಚಾರಗಳ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿರುವ ಬಗ್ಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ ಹಾಗೂ ಅಲ್ಲಿಯ ಮುಖ್ಯೋಪಾಧ್ಯಾಯರು ಬಹಳ ಅಸಡ್ಡೆಯಿಂದ ವರ್ತನೆ ಮಾಡಿರುವಂಥದ್ದೇನಿದೆ, ಅದರ ಬಗ್ಗೆ ಕೂಡ ಸರ್ಕಾರ ಕ್ರಮ ಜರುಗಿಸಲಿಕ್ಕೆ ಪರಿಶೀಲಿಸುತ್ತಿದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ತುಮಕೂರಿನ ಪ್ರಕರಣದ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಳ್ಳಿ ಎಂದು ನಾನು ಕೇಳಿದೆ ಸರ್.ನವೋದಯ ಶಾಲೆಯಲ್ಲಿಯೂ ಸಹ ಒಂದು ಹುಡುಗಿ ಸತ್ತುಹೋಗಿದೆ. ಮಂಡ್ಯದಲ್ಲಿ ಇಂಥ ಪ್ರಕರಣವಾಗಿದೆ, ಇಡೀ ರಾಜ್ಯದಲ್ಲಿಯೂ ಇದರ ಪುನರಾವರ್ತನೆಯಾಗುತ್ತಿದ್ದರೆ ಗತಿಯೇನು ಸರ್?

ಶ್ರೀ ವಾಟಾಳ್ ನಾಗರಾಜ್ : ಸರ್ ತಮ್ಮ ಉತ್ತರ ನಿಜಕ್ಕೂ ನಮಗೆ ಸಮಾಧಾನ ತಂದಿಲ್ಲ, ಪ್ರಾಮಾಣಿಕವಾಗಿ ಹೇಳುವುದಾದರೆ ನಿಮ್ಮ ಉತ್ತರದಿಂದ ನಮಗೆ ಸಮಾಧಾನವಿಲ್ಲ. ನಿಮ್ಮ ಉತ್ತರದಿಂದ ನಮಗೆ ಬೇಸರವಾಗಿದ್ದು ನಾನು ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರಗೆ ನಡೆದರು)

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ನವೋದಯ ಶಾಲೆಯಲ್ಲಿ ಒಂದು ಹೆಣ್ಣುಮಗಳು ಸತ್ತು ಈಗಾಗಲೇ 15 ದಿವಸಗಳಾಗಿವೆ..... ತುಮಕೂರು ತುಂಬಾ ದೊಡ್ಡ ಗಲಾಟೆಯಾಗಿದೆ.

ಅಧ್ಯಕ್ಷರು : ನಿಮಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಆಯಿತು. ಈಗ ಆಫ್ಟರ್ ಸಮ್ಮರಿ ಎನ್ಕೈರಿ ಅವರನ್ನು ಡಿಸ್ಮಿಸ್ ಮಾಡಬೇಕೆಂದು ನಾನು ಹೇಳಿದ್ದೇನೆ.

ಶ್ರೀ ಅಲ್ಕೋಡ್ ಹನುಮಂತಪ್ಪ : ಮುಖ್ಯೋಪಾಧ್ಯಾಯರನ್ನು ಬಂಧನ ಮಾಡಿ ಎಂದು ಪತ್ರಿಕೆಯಲ್ಲಿ .....

ಶ್ರೀ ಜೆ. ಸಿ. ಮಾಧುಸ್ವಾಮಿ : ಹೆಣ್ಣುಮಕ್ಕಳು ಸಾಯುತ್ತಿದ್ದರೆ ಪತ್ರಿಕೆಯಲ್ಲಿ ಬರಬೇಕೆಂದು ಹೇಳುತ್ತೀರಿ, ಯಾರಿಗೆ ಮಾತನಾಡುತ್ತಿದ್ದೀರಿ, ಹೆಣ್ಣುಮಕ್ಕಳು ಸಾಯುತ್ತಿದ್ದರೆ ಪತ್ರಿಕೆಯಲ್ಲಿ ಬರಬೇಕೆನ್ನುವುದನ್ನು ನಿಮಗೆ ಇಟ್ಟುಕೊಳ್ಳಿರಿ.

ಅಧ್ಯಕ್ಷರು : ನೀವು ನೀವೇ ಏತಕ್ಕೆ ಮಾತನಾಡುತ್ತಿದ್ದೀರಿ ?

ಶ್ರೀ ಅಲ್ಕೋಡ್ ಹನುಮಂತಪ್ಪ : ಸರ್ ಮುಖ್ಯಮಂತ್ರಿಗಳು ಏನು ಹೇಳಿದರು. ಉತ್ತರವನ್ನು ಸದನಕ್ಕೆ ಒದಗಿಸುವುದಾಗಿ ತಿಳಿಸಿದ್ದಾರೆ, ಅದಕ್ಕಾಗಿ ಏತಕ್ಕೆ ಹೊರಗೆ ಹೋಗಬೇಕು?

ಶ್ರೀ ಜೆ. ಸಿ. ಮಾಧುಸ್ವಾಮಿ : ನವೋದಯ ಶಾಲೆಯಲ್ಲಿ ನಡೆದಿರುವ ಪ್ರಕರಣದ ಮೇಲೆ ಅದೇ ರೀತಿ ಕ್ರಮ ತೆಗೆದುಕೊಳ್ಳಿ ಎಂದು ನಾನು ಮುಖ್ಯಮಂತ್ರಿಯವರಲ್ಲಿ ಕೇಳಲಿಕ್ಕೆ ನನಗೆ ಹಕ್ಕಿಲ್ಲವೇ behave yourself ನೀವ್ಯಾರೀ ಉತ್ತರ ಹೇಳಲಿಕ್ಕೆ? ಏನು ಮಾತನಾಡುತ್ತಿದ್ದೀರಿ ನೀವು; ಮಂತ್ರಿಯಾಗಿ ನೀವು you must behave resposibly. xx ಸರ್ ಇದು ಪ್ರಿವಿಲೇಜ್ ಆಗುತ್ತದೆ.

(ಗೊಂದಲ)

(ಈ ಹಂತದಲ್ಲಿ ಹಲವಾರು ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

---

xx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಏನಿದು ಇದು ವಿಧಾನಸಭೆನಾ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾಧುಸ್ವಾಮಿ ದಯಮಾಡಿ ಮೊದಲು ಕುಳಿತುಕೊಳ್ಳಿರಿ, ಆಯಿತು I am on my legs, ದಯಮಾಡಿ ಮೊದಲು ಕುಳಿತುಕೊಳ್ಳಿ. ನೀವುಗಳು ಹಿರಿಯ ಸದಸ್ಯರೇ ಹೀಗೆ ಮಾಡಿದರೆ ಹೇಗೆ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ನಿಮಗೆಲ್ಲಾ ಎಲಿಮೆಂಟರಿ ಜ್ಞಾನ ಇದೆಯೋ ಅಥವಾ ಇಲ್ಲವೇ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಆಯಿತು ಹನುಮಂತಪ್ಪರವರೇ, ಕುಳಿತುಕೊಳ್ಳಿ.

ಶ್ರೀ ಅಲ್ಕೋಡ್ ಹನುಮಂತಪ್ಪ : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.....

(ಗೊಂದಲ)

ಅಧ್ಯಕ್ಷರು : ಇದೇನು ಸದನವೇ? ನಾನೇನಾದರೂ ಮಾತನಾಡಿದರೆ ನೀವು ಅಬ್ಜೆಕ್ಷನ್ ತೆಗೆಯುವಿರಿ? ನಾನು ನಿಂತಿದ್ದೇನೆ, ನೀವೆಲ್ಲಾ ಕುಳಿತು ಕೊಳ್ಳಬೇಕೆಂಬ ಎಲಿಮೆಂಟರಿ ಜ್ಞಾನ ಇಲ್ಲವೇ? ನೋ, ನೋ, ಇದು ಸರಿಯಲ್ಲ. ಯಾರೇ ಆಗಲಿ, ಈ ಕಡೆಯವರೇ ಮಾತಾಡಲಿ, ಆ ಕಡೆಯವರೇ ಮಾತನಾಡಲಿ ನಿಮಗೆ ಒಂದು ಎಲಿಮೆಂಟರಿ ಜ್ಞಾನ ಇಲ್ಲವಲ್ಲಾ ಮಾಧುಸ್ವಾಮಿಯವರೇ, ಮೊದಲು ಕುಳಿತುಕೊಳ್ಳಿರಿ. ದಯಮಾಡಿ ಈ ರೀತಿ ನಡೆದುಕೊಂಡರೆ ಈ ಹೌಸ್ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ, ಇಂತಹ ಸನ್ನಿವೇಶಗಳು ಬರುತ್ತವೆ, ಅದಕ್ಕೇನೆಂದರೆ ಯಾರಿ ರೀತಿಯಲ್ಲಿ ಉತ್ತರ ಕೊಡಬೇಕು, ಮಾತಾಡಬೇಕು ಅನ್ನದೇನೇ ಎಲ್ಲರೂ ನಿಂತುಕೊಂಡು ಎಲ್ಲಾ ಕೈ ತೋರಿಸುವ ರೀತಿಯಲ್ಲಿ ಮಾಡಿದರೆ ಹೇಗೆ? ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿಕ್ಕೆ ನಿಂತಿದ್ದಾರೆ ಅವರೇನು ಉತ್ತರ ಕೊಡುತ್ತಾರೆ ನೋಡಿ ಆಮೇಲೆ ನಿಮ್ಮ ಪ್ರಶ್ನೆಗಳನ್ನು ಕೇಳಿ. ಆಯಿತು, ಈಗ ಮುಖ್ಯಮಂತ್ರಿಗಳನ್ನು ಕರೆದಿದ್ದೇನೆ, ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಮೇಲೆ ನಡೆದುಕೊಳ್ಳತಕ್ಕಂಥ ಒಂದು ಅನಾಗರೀಕ ವರ್ತನೆಗಳೇನಿವೆ, ಇದು ಬೇಲಿಯೇ ಎದ್ದು ಹೊಲವನ್ನು ಮೇಯುವಂತಹ ವಾತಾವರಣ ನಿರ್ಮಾಣವಾದ ಹಾಗಿದೆ. ಶಿಕ್ಷಕರು ಈ ದೇಶದಲ್ಲಿ ಮುಂದಿನ ಭವಿಷ್ಯವನ್ನು ನಿರ್ಮಾಣ ಮಾಡತಕ್ಕಂಥ ಮಕ್ಕಳನ್ನು ಸಮಾಜಕ್ಕೆ ಕೊಡುಗೆಯಾಗಿ ಕೊಡಬೇಕಾದಂಥ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕವರಿಂದಲೇ ಈ ರೀತಿ ಘಟನೆಗಳು ಏನು ಪುನರಾವರ್ತನೆಯಾಗುತ್ತಿದೆ, ಇದರ ಬಗ್ಗೆ ಸಂಪೂರ್ಣವಾಗಿ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ

ಸರ್ಕಾರ ಹಿಂಜರಿಯುವಂಥ ಪ್ರಶ್ನೆಯೇ ಇಲ್ಲ. ರಾಜ್ಯದ ಯಾವುದೇ ಭಾಗದಲ್ಲಿ ಈ ರೀತಿಯ ಘಟನೆಗಳು ನಡೆದಿದ್ದರೆ ಮತ್ತು ಅದರಲ್ಲೂ ಹೆಣ್ಣು ಮಕ್ಕಳುಗಳ ವಿಷಯದಲ್ಲಿ ನಾವೆಲ್ಲಾ ಇವತ್ತು ಅವರಿಗೆ ರಕ್ಷಣೆ ಕೊಡತಕ್ಕಂಥಾದ್ದಕ್ಕೆ ಹೆಣ್ಣು ಮಕ್ಕಳ ಪರವಾಗಿ ಕಾರ್ಯಕ್ರಮಗಳನ್ನು ಕೊಡತಕ್ಕಂಥಾದ್ದಕ್ಕೆ ಕಾಳಜಿಯನ್ನು ವ್ಯಕ್ತಪಡಿಸುತ್ತೇವೆ. ನಾನು ತಮ್ಮ ಮುಖಾಂತರ ಸದನದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಈ ವಿಷಯದಲ್ಲಿ ಯಾವುದೇ ಪ್ರಕರಣಗಳು ಇರಲಿ, ಆ ಪ್ರಕರಣಗಳ ಬಗ್ಗೆ ಕಠಿಣವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಇವತ್ತು ಏನು ಮಾನ್ಯ ಮಾಧುಸ್ವಾಮಿಯವರು, ನವೋದಯ ಶಾಲೆಯ ವಿಷಯವನ್ನು ಏನು ಗಮನಕ್ಕೆ ತಂದಿದ್ದಾರೆ ಆ ವಿಷಯದಲ್ಲೂ ನಾನು ಕ್ರಮವನ್ನು ತೆಗೆದುಕೊಳ್ಳುವುದಾಗಿ ಹೇಳಬಯಸುತ್ತೇನೆ.

7. ಗಮನ ಸೆಳೆಯುವ ಸೂಚನೆ.

ವಿಷಯ: ಮುದ್ದೇಬಿಹಾಳ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ): ಮಾನ್ಯ ಅಧ್ಯಕ್ಷರೆ, ಮುದ್ದೇಬಿಹಾಳ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸಾರ್ವಜನಿಕರು ನಡೆಸುತ್ತಿರುವ ಧರಣಿಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮುದ್ದೇಬಿಹಾಳ ಪಟ್ಟಣದ ಜನ ಸಂಖ್ಯೆಯು 2001ರ ಜನಗಣತಿಯ ಪ್ರಕಾರ 28,235 ಇದ್ದು ಸಧ್ಯದ ಜನಸಂಖ್ಯೆಯು ಸುಮಾರು 30,000 ಇರುತ್ತದೆ. ಸದರಿ ಪಟ್ಟಣಕ್ಕೆ 25,000 ಜನಸಂಖ್ಯೆಗೆ ಪ್ರತಿ ದಿನ 113 ಲೀಟರ್ ನೀರಿನ ಪ್ರಮಾಣಕ್ಕೆ ವಿನ್ಯಾಸಿಸಿ ನಾರಾಯಣಪುರ ಹಿನ್ನೀರಿನ ಮೂಲದ ಯೋಜನೆಯನ್ನು ರೂ. 225.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 1991ರಲ್ಲಿ ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ. 10 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ಮತ್ತು ವಿತರಣಾ ಕೊಳವೆ ಮಾರ್ಗವನ್ನು 2002-03ನೇ ಸಾಲಿನಲ್ಲಿ ಹೊಸ ಬಡಾವಣೆಗಳಲ್ಲಿ ಅಳವಡಿಸಲಾಗಿದೆ.

ಬೆಳೆಯುತ್ತಿರುವ ಜನ ಸಂಖ್ಯೆಯಿಂದ ಸದ್ಯ ಚಾಲ್ತಿಯಲ್ಲಿರುವ ಯೋಜನೆಯಿಂದ ನೀರು ಸರಬರಾಜು ಸಾಕಾಗುತ್ತಿಲ್ಲ ಆದ್ದರಿಂದ 2016ರಲ್ಲಿ ಮುದ್ದೇಬಿಹಾಳ ಪಟ್ಟಣದ ಜನಸಂಖ್ಯೆಯು 43,634 ಎಂದು ಮಧ್ಯಂತರವಾಗಿ ಅಂದಾಜಿಸಿ ಹಾಗೂ 2013ರಲ್ಲಿ ಸದರಿ ಪಟ್ಟಣದ ಜನಸಂಖ್ಯೆಯನ್ನು 62,338 ಎಂದು ಅಂದಾಜಿಸಿ ಪ್ರತ್ಯೇಕ ಯೋಜನೆಯನ್ನು ರೂ. 653.20 ಲಕ್ಷಗಳಿಗೆ ಸಿದ್ಧಪಡಿಸಲಾಗಿದೆ. ಯೋಜನೆಯ ವಿವರ ಈ ಕೆಳಕಂಡಂತಿದೆ.